ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 21/9/2020

# ಶಾಸಕರು ಪಾಸಿಟಿವ್ ಅಧಿವೇಶನ ನೆಗೆಟಿವ್

## ಕೊರೊನಾ ಕಲಾಪಕ್ಕೆ ಶಸ್ತ್ರಾಭ್ಯಾಸ

- ಕಲಾಪದ ಮೇಲೆ ಕೊರೊನಾ ಕರಿನೆರಳು
- ಶಾಸಕರು–ಅಧಿಕಾರಿಗಳಿಗೆ ಕೊರೊನಾ ಭೀತಿ
- ಅಧಿವೇಶನದ ಮೊಟಕಿನ ಸಾಧ್ಯತೆ
- ಬಿಎಸಿ ಸಭೆಯಲ್ಲಿಂದು ನಿರ್ಧಾರ
- ರಾಜಕೀಯ ಜಂಗೀಕುಸ್ತಿಗೆ ಅಖಾಡ ಸಜ್ಜು
- ಧೂಳೆಬ್ಬಿಸಲಿರುವ ವಿವಾದಾತ್ಮಕ ಮಸೂದೆಗಳು
- ಇಕ್ಕಟ್ಟಿನಲ್ಲಿ ಸಿಲುಕಿಸಲು ವಿಪಕ್ಷಗಳು ಸನ್ನದ್ಧ
- ಸಾರ್ವಜನಿಕರ ಪ್ರವೇಶ ನಿಷೇಧ

ಸಂ.ಕ.ಸಮಾಚಾರ, ಬೆಂಗಳೂರು 21/9/20

ರಾಜ್ಯ ವಿಧಾನಮಂಡಲದ ಅಧಿವೇಶನಕ್ಕೆ ಕ್ಷಣಗಣನೆ ಆರಂಭವಾಗಿದ್ದು ಶರವೇಗದಲ್ಲಿ ಹಬ್ಬುತ್ತಿರುವ ಕೊರೊನಾ ಸೋಂಕು ಕಲಾಪದ ಮೇಲೆ ಕರಿನೆರಳು ಬೀರುವ ಸಾಧ್ಯತೆಗಳು ನಿಚ್ಚಳವಾಗಿವೆ.

ಹದಿನೈದನೇ ವಿಧಾನಸಭೆಯ ಏಳನೇ ಅಧಿವೇಶನಕ್ಕೆ ಶಾಸನಸಭೆಯ ಉಭಯ ಸದನಗಳು ಸಜ್ಜುಗೊಂಡಿವೆ. ಸರ್ಕಾರ–ಪ್ರತಿಪಕ್ಷಗಳು ಸಂಸದೀಯ ಚಟುವಟಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಉಮೇದಿನಲ್ಲಿವೆಯಾದರೂ ಎಡೆಬಿಡದೆ ಕಾಡುತ್ತಿರುವ ಕೊರೊನಾ ಭೀತಿ ನಿಗದಿತ ರೀತಿಯಲ್ಲಿ ಕಲಾಪ ನಡೆಯುವುದಕ್ಕೆ ತೊಡಕಾಗಿದೆ. ಅಧಿವೇಶನದಲ್ಲಿ ಪಾಲ್ಗೊಳ್ಳಲು ಕೊರೊನಾ ತಪಾಸಣೆ ಕಡ್ಡಾಯಗೊಳಿಸಿರುವ ಬೆನ್ನಲ್ಲೇ ಶಾಸಕರು–ಅಧಿಕಾರಿಗಳಿಗೆ ಸೋಂಕಿನ ಭೀತಿ ಆವರಿಸಿದೆ.

ಈಗಾಗಲೇ ಉಪಮುಖ್ಯಮಂತ್ರಿ ಅಶ್ವಥ್‌ನಾರಾಯಣ, ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರನ್ನೊಳಗೊಂಡಂತೆ ಆರು ಸಚಿವರು ಮತ್ತು ಹಲವು ಶಾಸಕರಿಗೆ ಸೋಂಕು ದೃಢಪಟ್ಟಿದೆ. ಇದೇ ವೇಳೆ ರಾಜ್ಯದಲ್ಲಿ ಅದರಲ್ಲೂ ರಾಜಧಾನಿಯಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಲೇ ಇರುವುದು ಅಧಿವೇಶನದ ಸುಗಮ ಕಲಾಪಗಳಿಗೆ ಅಡ್ಡಿಯಾಗುವ ಮುನ್ಸೂಚನೆ ನೀಡಿದೆ.

ಅಧಿವೇಶನ ನಿರ್ವಹಣೆಯಲ್ಲಿ ಕೊರೊನಾ ನಿಯಮಾವಳಿಗಳ ಕಟ್ಟುನಿಟ್ಟಿನ ಪಾಲನೆ ಮತ್ತಿತರ ಹತ್ತಾರು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದರೂ ಸಹ ಕೊರೊನಾ ಭಯದ ನೆರಳು ಮಾತ್ರ ದಟ್ಟವಾಗಿರುವುದು ಸುಸ್ಪಷ್ಟ

ಸಂಸತ್ತಿನಲ್ಲಿ ನಡೆಯುತ್ತಿರುವ ಮಳೆಗಾಲದ ಅಧಿವೇಶನವೂ ಕೊರೊನಾ ಭೀತಿಯಿಂದಾಗಿ ಬುಧವಾರದ ಹೊತ್ತಿಗೆ ಸಮಾಪ್ತಿಗೊಳ್ಳುವುದು ಖಚಿತವಾಗಿದ್ದು ರಾಜ್ಯದಲ್ಲೂ ಪೂರ್ವನಿಗದಿಯಂತೆ ಹತ್ತು ದಿನಗಳ ಕಾಲ ಅಧಿವೇಶನ ನಡೆಯುವ ಅನುಮಾನ ದಟ್ಟವಾಗಿದೆ.




### ಇಂದು ನಿರ್ಧಾರ

ಅಧಿವೇಶನದ ಮೊದಲ ದಿನ ನಡೆಯುವ ಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಕೊರೊನಾದ ಕರಿನೆರಳಿನ ಕುರಿತು ಚರ್ಚೆಯಾಗುವ ಸಾಧ್ಯತೆಗಳಿವೆ. ಮೇಲ್ನೋಟಕ್ಕೆ ಅಧಿವೇಶನದ ಪೂರ್ಣಾವಧಿಯ ಬಗ್ಗೆ ಮಾತನಾಡುತ್ತಿರುವ ಆಡಳಿತಾರೂಢ ಬಿಜೆಪಿ, ಪ್ರತಿಪಕ್ಷಗಳಾದ ಕಾಂಗ್ರೆಸ್

ಕೊರೊನಾ ಕಾಡುತ್ತಿರುವುದು ಸುಳ್ಳೇನಲ್ಲ. ಹಾಗಾಗಿ ನಾಳಿನ ಕಲಾಪ ಸಲಹಾ ಸಮಿತಿಯ ಸಭೆಯಲ್ಲಿ ಸರ್ವ ಪಕ್ಷಗಳು ಸರ್ವಾನುಮತದಿಂದ ಅಧಿವೇಶನವನ್ನು ಕೆಲವೇ ದಿನಗಳಿಗೆ ಮೊಟಕುಗೊಳಿಸುವ ತೀರ್ಮಾನ ಕೈಗೊಳ್ಳುವುದು ಬಹುತೇಕ ಖಚಿತ ಎನ್ನಲಾಗಿದೆ. ಸೋಮವಾರ (ಇಂದು) ಆರಂಭವಾಗುವ ವಿಧಾನಮಂಡಲದ ಅಧಿವೇಶನವನ್ನು ಶುಕ್ರವಾರದ ಹೊತ್ತಿಗೇನೇ ಸಮಾಪ್ತಿಗೊಳಿಸಿ ಅನಿರ್ದಿಷ್ಟಾವಧಿಗೆ ಮುಂದೂಡಿದರೂ ಅಚ್ಚರಿಯಿಲ್ಲ. ಇಂತಹದೊಂದು ಚಿಂತನೆ ಭಾನುವಾರ ದಿಢೀರಾಗಿ ಮೊಳಕೆಯೊಡೆದಿದ್ದು ಸೋಮವಾರದ ಮಧ್ಯಾಹ್ನದ ಹೊತ್ತಿಗೆ ಈ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯುವುದಂತೂ ಖಂಡಿತ.

### ಅಖಾಡ ಸಜ್ಜು

ಈ ಮಧ್ಯೆ ಆರು ತಿಂಗಳ ಸುದೀರ್ಘ ಅವಧಿಯ ಬಳಿಕ ಸಮಾವೇಶಗೊಳ್ಳುತ್ತಿರುವ ವಿಧಾನಮಂಡಲದ ಉಭಯ ಸದನಗಳು ಆಡಳಿತ ಮತ್ತು ಪ್ರತಿಪಕ್ಷಗಳ ರಾಜಕೀಯ ಜಂಗೀಕುಸ್ತಿಗೆ ಸಜ್ಜಾಗಿದ್ದು ಭಾರೀ ಕುತೂಹಲ ಕೆರಳಿಸಿದೆ.

ಭೂ ಸುಧಾರಣಾ ಕಾಯ್ದೆ ಸೇರಿದಂತೆ ಕೆಲ ಪ್ರಮುಖ ವಿಧೇಯಕಗಳು ಮಂಡನೆಗೊಳ್ಳಲಿವೆ. ಈ ವಿಧೇಯಕಗಳ ಕುರಿತಂತೆ ಬಿಸಿ ಬಿಸಿ ಚರ್ಚೆ ನಿರೀಕ್ಷಿತವಾಗಿದೆ. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, ಕರ್ನಾಟಕ ಸಾಂಕ್ರಾಮಿಕ ರೋಗಗಳ ವಿಧೇಯಕ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ವಿಧೇಯಕ ಅನುಮೋದನೆಗೆ ಕಾದಿರುವ ಇನ್ನಿತರ ಪ್ರಮುಖ ಮಸೂದೆಗಳು. ಹೊಸದಾಗಿ ಮಂಡಿಸಲಾಗುವ ವಿಧೇಯಕಗಳಲ್ಲದೇ, ಕಳೆದ ಬಾರಿಯ ಅಧಿವೇಶನದಲ್ಲಿ ವಿಧಾನ ಪರಿಷತ್ ಅಂಗೀಕಾರ ಮಾಡಬೇಕಾಗಿದ್ದ ಕೆಲ ಮಹತ್ವದ ಮಸೂದೆಗಳನ್ನೂ ಅಂಗೀಕಾರ ಮಾಡಬೇಕಾಗಿದೆ.

ಕೊರೊನಾ ನಿರ್ವಹಣೆ ಸಾಧನಗಳ ಖರೀದಿಯಲ್ಲಿ ಹಗರಣ ನಡೆದಿದೆ ಎಂಬ ಕಾಂಗ್ರೆಸ್ ಆರೋಪ ಈ ಬಾರಿ